# ರಾಮಕೃಷ್ಣ ಸುದ್ದಿ ಸಂಚಯ

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

TREASURY OF TRUST & SERVICE 25 1994-2019

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com Email : ho@ramakrishnacredit.com

**ಸಂಪುಟ : V** **ಸಂಚಿಕೆ : 1** **ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ** **ಜುಲೈ – ಸೆಪ್ಟೆಂಬರ್ 2019**


## ಅಧ್ಯಕ್ಷರ ಮಾತು



**ಶ್ರೀ ಕೆ. ಜೈರಾಜ್ ಬಿ. ರೈ**
**ಅಧ್ಯಕ್ಷರು**

2018–19ನೇ ಸಾಲಿನ ಮಹಾಸಭೆಯು ದಿನಾಂಕ 01.09.2019ರಂದು ಜರಗಿತು. ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಹಾಜರಿದ್ದು, ಸಕ್ರಿಯವಾಗಿ ಭಾಗವಹಿಸಿ ಮಹಾಸಭೆಯನ್ನು ಯಶಸ್ವಿಗೊಳಿಸಿರುವುದಕ್ಕೆ ಎಲ್ಲಾ ಸದಸ್ಯ ಬಾಂಧವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. 2018–19ನೇ ಸಾಲಿನ ಸಂಘದ ಸರ್ವತೋಮುಖ ಪ್ರಗತಿಯನ್ನು ಪರಿಗಣಿಸಿ ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನವರು ಸಂಘಕ್ಕೆ ದಿನಾಂಕ 07.09.2019ರಂದು ಸಾಧನಾ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ಈ ಪ್ರಶಸ್ತಿಯು ಸಂಘಕ್ಕೆ 8 ಬಾರಿ ಹಾಗೂ ಸತತ 3 ವರ್ಷಗಳಿಂದ ದೊರಕಿರುತ್ತದೆ.

2019–20ನೇ ಸಾಲಿನ ಅರ್ಧ ವಾರ್ಷಿಕ ಅವಧಿ 30.09.2019ಕ್ಕೆ ರೂ.216 ಕೋಟಿ ಠೇವಣಿ, ರೂ.177 ಕೋಟಿ ಸಾಲದೊಂದಿಗೆ ಒಟ್ಟು ವ್ಯವಹಾರ ರೂ.393 ಕೋಟಿಯನ್ನು ಮೀರಿದೆ, ಇದನ್ನು 30.09.2018ಕ್ಕೆ ಹೋಲಿಸುವಾಗ ರೂ.77 ಕೋಟಿ, (ಠೇವಣಿ ರೂ.41 ಕೋಟಿ ಮತ್ತು ಸಾಲ ರೂ.36 ಕೋಟಿ).

31 ಮಾರ್ಚ್ 2019ಕ್ಕೆ ಹೋಲಿಸುವಾಗ, ರೂ.41 ಕೋಟಿ ಹೆಚ್ಚಳ (ಠೇವಣಿ ರೂ.22 ಕೋಟಿ, ಸಾಲ ರೂ.19 ಕೋಟಿ), ರೂ.2.09 ಕೋಟಿ ನಿವ್ವಳ ಲಾಭವನ್ನು ದಾಖಲಿಸಿ, 2019–20ನೇ ಸಾಲಿನ ಮೊದಲ ಅರ್ಧ ವಾರ್ಷಿಕ ಅವಧಿಗೆ ಅತ್ಯುತ್ತಮ ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ತಿಳಿಸಲು ತುಂಬಾ ಸಂತೋಷವಾಗುತ್ತಿದೆ. ಇದಕ್ಕೆ ಕಾರಣಕರ್ತರಾದ ಆಡಳಿತ ಮಂಡಳಿಯ ಸರ್ವ ನಿರ್ದೇಶಕರು, ಶಾಖಾ ಸಲಹಾ ಸಮಿತಿ ಹಾಗೂ ಎಲ್ಲಾ ಸಿಬ್ಬಂದಿಗಳಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

### 2019–20ನೇ ಸಾಲಿನ ಅರ್ಧ ವಾರ್ಷಿಕ ಅವಧಿ ದಿನಾಂಕ 30.09.2019ಕ್ಕೆ ಇದ್ದಂತೆ ಪ್ರಗತಿಯ ಪಕ್ಷಿನೋಟ (ರೂ. ಕೋಟಿ)

| ಕ್ರ. ಸಂ. | ಕಾರ್ಯ ವಿಭಾಗ | ಸೆಪ್ಟೆಂಬರ್ 2018ಕ್ಕೆ ಇದ್ದಂತೆ | ಸೆಪ್ಟೆಂಬರ್ 2019ಕ್ಕೆ ಇದ್ದಂತೆ | ಹೆಚ್ಚಳ (ರೂ) | ಶೇ. |
|---|---|---|---|---|---|
| 1 | ಠೇವಣಾತಿಗಳು | ರೂ.175 ಕೋಟಿ | ರೂ.216 ಕೋಟಿ | ರೂ.41 ಕೋಟಿ | 23% |
| 2 | ಸಾಲ ಮತ್ತು ಮುಂಗಡ | ರೂ.141 ಕೋಟಿ | ರೂ.177 ಕೋಟಿ | ರೂ.36 ಕೋಟಿ | 26% |
| 3 | ಒಟ್ಟು ವ್ಯವಹಾರ | ರೂ.316 ಕೋಟಿ | ರೂ.393 ಕೋಟಿ | ರೂ.77 ಕೋಟಿ | 24% |
| 4 | ನಿವ್ವಳ ಲಾಭ | ರೂ.1.82 ಕೋಟಿ | ರೂ.2.09 ಕೋಟಿ | ರೂ.0.27 ಲಕ್ಷ | 15% |
| 5 | ಅನುತ್ಪಾದಕ ಆಸ್ತಿ (Absolute) | ರೂ.41.75 ಲಕ್ಷ | ರೂ.35.34 ಲಕ್ಷ | ರೂ.6.41 ಲಕ್ಷ (ಕಡಿಮೆ) | |
| | ಶೇಕಡಾವಾರು | 0.29% | 0.20% | | |
| 6 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | – | – |

ಈ ಅರ್ಧವಾರ್ಷಿಕ ಅವಧಿಯಲ್ಲಿ ನಿಗದಿತ ಎಲ್ಲಾ ಮುಖ್ಯ ಗುರಿಗಳನ್ನು ತಲುಪಿದ ಚಿಲಿಂಬಿ, ವೆಲೆನ್ಸಿಯಾ, ಸುರತ್ಕಲ್ ಮತ್ತು ಹಂಪನಕಟ್ಟೆ ಶಾಖೆಗಳಿಗೆ ಹಾಗೂ ಈ ಅವಧಿಯಲ್ಲಿ ಉತ್ತಮ ಪ್ರಗತಿಯನ್ನು ತೋರಿಸಿರುವ ಎಲ್ಲಾ ಶಾಖೆಗಳಿಗೆ ಅಭಿನಂದನೆಗಳು. ನಿಗದಿತ ಗುರಿಗಳನ್ನು ಪ್ರತಿ ತಿಂಗಳು ಸಾಧಿಸಿ, ಮುಂಬರುವ ಅವಧಿಯಲ್ಲಿ ಇದಕ್ಕಿಂತ ಹೆಚ್ಚಿನ ಪ್ರಗತಿಯನ್ನು ದಾಖಲಿಸಿ, ಸಂಘವು ಗುರಿ ಮೀರಿದ ಸಾಧನೆಯನ್ನು ಮಾಡಲು ಎಲ್ಲಾ ಶಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳು ಸದಾ ಕಾರ್ಯತತ್ಪರಾಗಿರಿ ಎಂದು ಅಪೇಕ್ಷಿಸುತ್ತೇನೆ.

**ಕೆ. ಜೈರಾಜ್ ಬಿ. ರೈ, ಅಧ್ಯಕ್ಷರು**

## ಸಂಘದ 25ನೇ ವಾರ್ಷಿಕ ಮಹಾಸಭೆ 2018–19ನೇ ಸಾಲಿಗೆ ಶೇ.25 ಡಿವಿಡೆಂಡ್




ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯ 25ನೇ ವಾರ್ಷಿಕ ಮಹಾಸಭೆ ಸಂಘದ ಅಧ್ಯಕ್ಷ ಕೆ. ಜೈರಾಜ್ ಬಿ. ರೈಯವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಉರ್ವ ಸೆಂಟನರಿ ಚರ್ಚ್ ಹಾಲ್ ನಲ್ಲಿ ದಿನಾಂಕ 01.09.2019ರಂದು ಜರಗಿತು.

ಸಂಘವು 1994ರಂದು ಸ್ಥಾಪನೆಗೊಂಡು ಇದೀಗ ಸದಸ್ಯರ ಸೇವೆಯಲ್ಲಿ ಯಶಸ್ವಿ 25ನೇ ವರ್ಷ ಪೂರೈಸಿದ್ದು ಬೆಳ್ಳಿ ಹಬ್ಬದ ಸಡಗರದಲ್ಲಿದೆ. ಸಂಘವು 31.03.2019ಕ್ಕೆ ಅಂತ್ಯವಾದ 2018–19ನೇ ಸಾಲಿನಲ್ಲಿ ರೂ.193 ಕೋಟಿ ಠೇವಣಾತಿ, ರೂ.158 ಕೋಟಿ ಹೊರಬಾಕಿ ಸಾಲದೊಂದಿಗೆ ಒಟ್ಟು ವ್ಯವಹಾರ ರೂ.352 ಕೋಟಿ ತಲುಪಿದೆ. ಹಿಂದಿನ ಸಾಲಿಗೆ ಹೋಲಿಸುವಾಗ ಠೇವಣಾತಿಯಲ್ಲಿ ಶೇ.21% ಹಾಗೂ ಸಾಲ ನೀಡುವಿಕೆಯಲ್ಲಿ ಶೇ.24% ಪ್ರಗತಿಯನ್ನು ಸಾಧಿಸಿದೆ. ನಿವ್ವಳ ಅನುತ್ಪಾದಕ ಆಸ್ತಿಯು ಶೂನ್ಯ ಪ್ರಮಾಣದಲ್ಲಿದ್ದು, ರೂ.5.78 ಕೋಟಿ ನಿವ್ವಳ ಲಾಭ ಗಳಿಸಿದ್ದು, ಲಾಭ ವಿಂಗಡಣೆಯಲ್ಲಿ ಸದಸ್ಯರಿಗೆ ಶೇ.25 ಡಿವಿಡೆಂಟ್‌ನ್ನು ನೀಡಲು ಮಹಾಸಭೆಯು ನಿರ್ಧರಿಸಿದೆ.

2017–18ನೇ ಸಾಲಿನ ಸಂಘದ ಅಮೂಲಾಗ್ರ ಪ್ರಗತಿಯನ್ನು ಪರಿಗಣಿಸಿ ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್ ನೀಡುವ ಸಾಧನಾ ಪ್ರಶಸ್ತಿ ಸಂಘಕ್ಕೆ ಲಭಿಸಿದೆ ಎಂದು ಸಂಘದ ಅಧ್ಯಕ್ಷರಾದ ಕೆ. ಜೈರಾಜ್ ಬಿ. ರೈರವರು ಸಭೆಗೆ ತಿಳಿಸಿದರು.

ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್‌ನ ನಿರ್ದೇಶಕರಾಗಿ ಚುನಾಯಿತರಾದ ಸಂಘದ ಅಧ್ಯಕ್ಷರಾದ ಕೆ. ಜೈರಾಜ್ ಬಿ ರೈ ಯವರನ್ನು ಮತ್ತು ದ.ಕ.ಜಿಲ್ಲಾ ಸಹಕಾರಿ ಯೂನಿಯನ್‌ಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಸಂಘದ ನಿರ್ದೇಶಕರಾದ ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ ಯವರನ್ನು ಮಹಾಸಭೆಯಲ್ಲಿ ಸನ್ಮಾನಿಸಲಾಯಿತು.

ಪ್ರಭಾರ ಮಹಾಪ್ರಬಂಧಕ ಗಣೇಶ್ ಜಿ.ಕೆ. ಲೆಕ್ಕಪರಿಶೋಧಿತ ಆರ್ಥಿಕ ತಖ್ತೆ, ಲಾಭ ವಿಂಗಡಣೆ, ಬಜೆಟ್, ಬೈಲಾ ತಿದ್ದುಪಡಿ ಪ್ರಸ್ತಾವನೆಗಳನ್ನು ಮಂಡಿಸಿದರು. 2018–19 ಸಾಲಿನಲ್ಲಿ ನಿಗದಿತ ಗುರಿಯನ್ನು ಸಾಧಿಸಿ ಅತ್ಯುತ್ತಮ ಕಾರ್ಯನಿರ್ವಹಣೆ ತೋರಿದ ಶಾಖೆಗಳನ್ನು ಅಭಿನಂದಿಸಲಾಯಿತು.

"ಸ್ಥಾಪಕಾಧ್ಯಕ್ಷ ದಿ| ಕೆ.ಬಿ. ಜಯಪಾಲ ಶೆಟ್ಟಿ ಸ್ಮರಣಾರ್ಥ ಪ್ರತಿಭಾ ಪುರಸ್ಕಾರ" 2018–19 ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಸಿಬ್ಬಂದಿಗಳ ಮಕ್ಕಳಾದ ಕುಮಾರಿ ಲಿಪಿ ಹೆಗ್ಡೆ, ಮಾಸ್ಟರ್ ಅನ್ಶು ಶೆಟ್ಟಿ ಮತ್ತು ಕುಮಾರಿ ರಕ್ಷಾ ಎಂ. ಶೆಟ್ಟಿಯವರಿಗೆ ನೀಡಿ ಸನ್ಮಾನಿಸಲಾಯಿತು.

ಸಂಘದ ಉಪಾಧ್ಯಕ್ಷೆ ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿ ಹಾಗೂ ನಿರ್ದೇಶಕರಾದ ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ, ಡಾ. ಕೆ.ಸುಭಾಶ್ಚಂದ್ರ ಶೆಟ್ಟಿ, ಶ್ರೀ ಪಿ.ಎಸ್. ಅಡ್ಯಂತಾಯ, ಶ್ರೀ ಸಿಎ ಹೆಚ್.ಆರ್ ಶೆಟ್ಟಿ, ಶ್ರೀ ಯಂ.ರಾಮಯ ಶೆಟ್ಟಿ, ಶ್ರೀ ಅರುಣ್‌ಕುಮಾರ್ ಶೆಟ್ಟಿ, ಶ್ರೀ ಪಿ.ಬಿ. ದಿವಾಕರ ರೈ, ಶ್ರೀ ರವೀಂದ್ರನಾಥ ಜಿ. ಹೆಗ್ಡೆ, ಶ್ರೀ ಬಿ. ದಯಾಕರ್ ಆಳ್ವ, ಡಾ. ಎಂ.ಸುಧಾಕರ ಶೆಟ್ಟಿ ಉಪಸ್ಥಿತರಿದ್ದರು.

ನಿರ್ದೇಶಕರಾದ ಶ್ರೀ ಕೆ. ಸೀತಾರಾಮ ರೈ ಸವಣೂರು ಸ್ವಾಗತಿಸಿದರು, ಶ್ರೀ ಯಂ.ರಾಮಯ್ಯ ಶೆಟ್ಟಿ ವಂದಿಸಿದರು, ಸಿಬ್ಬಂದಿಗಳಾದ ಶ್ರೀ ಮೋಹನ್‌ದಾಸ್ ಶೆಟ್ಟಿ, ಶ್ರೀ ಚಂದ್ರಹಾಸ ಶೆಟ್ಟಿ ಮತ್ತು ಕುಮಾರಿ ಅಶ್ವಿತ ಎಂ. ಕಾರ್ಯಕ್ರಮ ನಿರೂಪಿಸಿದರು.

## ಸಂಘಕ್ಕೆ ಎಸ್‌ಸಿಡಿಸಿಸಿ ಬ್ಯಾಂಕಿನಿಂದ ಜಿಲ್ಲಾ ಮಟ್ಟದ ಸಾಧನಾ ಪ್ರಶಸ್ತಿ



ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಮಂಗಳೂರು ಇವರು ದಿನಾಂಕ 07.09.2019ರಂದು ಜರಗಿದ ಬ್ಯಾಂಕಿನ ಮಹಾಸಭೆಯಲ್ಲಿ ನಮ್ಮ ಸಂಘವು ಸಾಧಿಸಿದ ಸರ್ವತೋಮುಖ ಪ್ರಗತಿ ಮತ್ತು ಬ್ಯಾಂಕಿನೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವುದನ್ನು ಪರಿಗಣಿಸಿ ಸಂಘಕ್ಕೆ 'ಸಾಧನಾ ಪ್ರಶಸ್ತಿ–2018–19'ನ್ನು ನೀಡಿ ಗೌರವಿಸಿತು. ಎಸ್.ಸಿ.ಡಿ.ಸಿ.ಸಿ ಬ್ಯಾಂಕಿನ ಅಧ್ಯಕ್ಷರಾದ ಡಾ| ಎಂ.ಎನ್. ರಾಜೇಂದ್ರ ಕುಮಾರ್‌ರವರು, ಸಂಘದ ಅಧ್ಯಕ್ಷ ಶ್ರೀ ಕೆ.ಜೈರಾಜ್ ಬಿ. ರೈ ಮತ್ತು ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆಯವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಕುಂಬ್ರ ದಯಾಕರ ಆಳ್ವ ಮತ್ತು ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿಯವರು ಉಪಸ್ಥಿತರಿದ್ದರು. ಸಂಘಕ್ಕೆ ಎಸ್.ಸಿ.ಡಿ.ಸಿ.ಸಿ ಬ್ಯಾಂಕಿನ ಈ ಪ್ರಶಸ್ತಿಯು 8ನೇ ಬಾರಿಗೆ, ಹಾಗೂ ಸತತ 3 ವರ್ಷಗಳಿಂದ ದೊರಕಿರುತ್ತದೆ.

# ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರಿಗೆ ಹಾಗೂ ನಿರ್ದೇಶಕರಾದ ಶ್ರೀ ಬೆಳ್ಳಿಪಾಡಿ ಪ್ರಸಾದ್‌ಕೌಶಲ್ ಶೆಟ್ಟಿಯವರಿಗೆ ಗೌರವಾಭಿನಂದನೆ





ದಿನಾಂಕ 01/09/2019ರಂದು ಜರಗಿದ ಸಂಘದ 25ನೇ ವಾರ್ಷಿಕ ಮಹಾಸಭೆಯಲ್ಲಿ, ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನ ನಿರ್ದೇಶಕರಾಗಿ ಚುನಾಯಿತರಾದ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರಿಗೆ ಹಾಗೂ ದ.ಕ. ಜಿಲ್ಲಾ ಕೋ-ಓಪರೇಟಿವ್ ಯೂನಿಯನ್‌ನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ, ಸಂಘದ ನಿರ್ದೇಶಕರಾದ ಶ್ರೀ ಬೆಳ್ಳಿಪಾಡಿ ಪ್ರಸಾದ್‌ಕೌಶಲ್ ಶೆಟ್ಟಿಯವರಿಗೆ ಸಂಘದ ವತಿಯಿಂದ ಅಭಿಮಾನಪೂರ್ವಕವಾಗಿ ಅಭಿನಂದನೆಯನ್ನು ಅರ್ಪಿಸಲಾಯಿತು.

## ಸ್ಥಾಪಕಾಧ್ಯಕ್ಷ ದಿ| ಕೆ.ಬಿ. ಜಯಪಾಲ ಶೆಟ್ಟಿ ಸ್ಮರಣಾರ್ಥ ಪ್ರತಿಭಾ ಪುರಸ್ಕಾರ



ದಿನಾಂಕ 01/09/2019ರಂದು ಜರಗಿದ ಸಂಘದ 25ನೇ ವಾರ್ಷಿಕ ಮಹಾಸಭೆಯಲ್ಲಿ, 2018-19 ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಸಿಬ್ಬಂದಿಗಳ ಮಕ್ಕಳಾದ ಮಾಸ್ಟರ್ ಅನ್ತು ಶೆಟ್ಟಿ, ಕುಮಾರಿ ಲಿಪಿ ಹೆಗ್ಡೆ, ಮತ್ತು ಕುಮಾರಿ ರಕ್ಷಾ ಎಂ ಶೆಟ್ಟಿಯವರಿಗೆ, ಸ್ಥಾಪಕಾಧ್ಯಕ್ಷ ದಿ| ಕೆ.ಬಿ. ಜಯಪಾಲ ಶೆಟ್ಟಿ ಸ್ಮರಣಾರ್ಥ ಪ್ರತಿಭಾ ಪುರಸ್ಕಾರವನ್ನು ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮಕ್ಕಳ ಹೆತ್ತವರಾದ ಶ್ರೀಮತಿ ಮತ್ತು ಶ್ರೀ ಅಮರನಾಥ ಹೆಗ್ಡೆ, ಶ್ರೀಮತಿ ವೀಣಾ ಸಿ.ಶೆಟ್ಟಿ ಹಾಗೂ ಶ್ರೀಮತಿ ಮತ್ತು ಶ್ರೀ ಮೋಹನ್‌ದಾಸ್ ಶೆಟ್ಟಿಯವರು ಉಪಸ್ಥಿತರಿದ್ದರು.

## ರಾಜ್ಯದ ಪ್ರವಾಹ ಸಂತ್ರಸ್ತರಿಗೆ ಸಂಘದಿಂದ ರೂ.5 ಲಕ್ಷ ನೆರವು



ಸಂಘದ ವತಿಯಿಂದ ಪ್ರವಾಹ ಸಂತ್ರಸ್ತರ ನೆರವಿಗಾಗಿ ಮುಖ್ಯ ಮಂತ್ರಿ ಪರಿಹಾರ ನಿಧಿಗೆ, ಸಂಘದ ಅಧ್ಯಕ್ಷ ಕೆ.ಜೈರಾಜ್ ಬಿ. ರೈ ಯವರು ದಿನಾಂಕ 07.09.2019ರಂದು ಜರಗಿದ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಮಹಾಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷ ಡಾ| ಎಂ.ಎನ್. ರಾಜೇಂದ್ರ ಕುಮಾರ್‌ರವರಿಗೆ, ರೂ.5,00,001/- (ರೂಪಾಯಿ ಐದು ಲಕ್ಷದ ಒಂದು) ಸಹಾಯ ಧನದ ಚೆಕ್ಕನ್ನು ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಬೆಳ್ಳಿಪಾಡಿ ಪ್ರಸಾದ್‌ಕೌಶಲ್ ಶೆಟ್ಟಿ ಹಾಗೂ ಪ್ರಭಾರ ಮಹಾಪ್ರಬಂಧಕ ಗಣೇಶ್‌ಜಿ.ಕೆ. ಉಪಸ್ಥಿತರಿದ್ದರು.

## ಸಹಕಾರ ಶಿಕ್ಷಣ ನಿಧಿಯ ಚೆಕ್ ಹಸ್ತಾಂತರ



ಸಂಘದ 2018-19ನೇ ಸಾಲಿನ ಐನ್-ಲಾಭದಲ್ಲಿ ಸಹಕಾರಿ ಶಿಕ್ಷಣ ನಿಧಿಗೆ ತೆಗೆದಿರಿಸಲಾದ ರೂ.8,66,750/- (ರೂಪಾಯಿ ಎಂಟು ಲಕ್ಷದ ಅರವತ್ತಾರು ಸಾವಿರದ ಏಳು ನೂರ ಐವತ್ತು ಮಾತ್ರ)ವನ್ನು ಕರ್ನಾಟಕ ರಾಜ್ಯ ಕೋ-ಓಪರೇಟಿವ್ ಫೆಡರೇಶನ್ ಇವರ ಹೆಸರಿಗೆ ಬರೆಯಲಾದ ಚೆಕ್ಕನ್ನು ಸಂಘದ ಅಧ್ಯಕ್ಷರು ದ.ಕ.ಜಿಲ್ಲಾ ಸಹಕಾರಿ ಯೂನಿಯನ್‌ನ ಅಧ್ಯಕ್ಷರಿಗೆ ಹಸ್ತಾಂತರಿಸಿದರು.

## ಶ್ರದ್ಧಾಂಜಲಿ

ಶ್ರೀ ವಿಠಲ ಶೆಟ್ಟಿ (ಕಡಬ ಶಾಖೆಯ ಶಾಖಾಧಿಕಾರಿ ಶ್ರೀ ದಿನೇಶ್ ಶೆಟ್ಟಿಯವರ ತಂದೆ) ರವರು ದಿನಾಂಕ 15.09.2019ರಂದು ದೈವಾಧೀನರಾಗಿರುವರು, ಅಗಲಿದ ದಿವ್ಯಾತ್ಮಕ್ಕೆ ಚಿರಶಾಂತಿಕೋರಿಕೊಂಡು ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.

## ಹುಟ್ಟು ಹಬ್ಬದ ಶುಭಾಶಯಗಳು

| ಸಿಬ್ಬಂದಿಗಳ ಹೆಸರು ಮತ್ತು ಶಾಖೆ | |
|---|---|
| ಶ್ರೀಮತಿ ಯಶೋಧ ನ್ಯಾಕ್, ಉಡುಪಿ | ಶ್ರೀ ರಕ್ಷಿತ್ ಆರ್. ಶೆಟ್ಟಿ, ತೊಕ್ಕೊಟ್ಟು |
| ಶ್ರೀ ಅಣ್ಣಪ್ಪ ಶೆಟ್ಟಿ, ಉಡುಪಿ | ಶ್ರೀಮತಿ ಸೌಮ್ಯರಾಣಿ, ವೆಲೆನ್ಸಿಯಾ |
| ಶ್ರೀಮತಿ ಸವಿತಾ ಪೂಂಜಾ, ಚಿಲಿಂಬಿ | ಶ್ರೀ ಧನಂಜಯ ಕುಮಾರ್, ಸುರತ್ಕಲ್ |
| ಶ್ರೀ ಸಂತೋಷ್, ಕುಂದಾಪುರ | ಶ್ರೀ ಶಮಂತ್ ಟಿ. ರೈ, ಕೇಂದ್ರ ಕಛೇರಿ |
| ಶ್ರೀಮತಿ ನಂದಿತಾ ಆಚಾರ್ಯ, ವೆಲೆನ್ಸಿಯಾ | ಕು. ಸುಶ್ಮಿತ, ಉಡುಪಿ |
| ಕು. ಪೂರ್ಣಿಮ, ಹೆಬ್ರಿ | ಕು. ಕೌಸ್ತುಭ ಶೆಟ್ಟಿ, ಮುಲ್ಕಿ |

## ಅಭಿನಂದನೆಗಳು

- ಸಂಘದ ವೆಲೆನ್ಸಿಯಾ ಶಾಖೆಯ ಶಾಖಾಧಿಕಾರಿ ಶ್ರೀ ಚಂದ್ರಹಾಸ್ ಶೆಟ್ಟಿಯವರು ಗಂಡು ಮಗುವಿನ ತಂದೆಯಾಗಿದ್ದಾರೆ. ಇವರಿಗೆ ಹಾರ್ದಿಕ ಅಭಿನಂದನೆಗಳು.
- ಸಂಘದ ಮಂಗಳೂರು ಶಾಖೆಯ ಅಕೌಂಟೆಂಟ್ ಶ್ರೀಮತಿ ಮಮತಾ ಎಂ. ರವರು ಹೆಣ್ಣು ಮಗುವಿನ ತಾಯಿಯಾಗಿದ್ದಾರೆ. ಇವರಿಗೆ ಹಾರ್ದಿಕ ಅಭಿನಂದನೆಗಳು.
- ಸಂಘದ ಕುಂದಾಪುರ ಶಾಖೆಯ ಕ್ಲರ್ಕ್ ಕು. ಲಾವಣ್ಯ ರವರ ವಿವಾಹವು ಚಿ| ರೋಹಿತ್‌ರವರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ–ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.

## ದಿನಾಂಕ 28.07.2019ರಂದು ಜರಗಿದ ಸರ್ವ ಸಿಬ್ಬಂದಿ ಸಮಾವೇಶ ಉದ್ಘಾಟನೆ








ದಿನಾಂಕ 18.08.2019ರಂದು ಜರಗಿದ
HDCM Course ಉದ್ಘಾಟನೆ



ದಿನಾಂಕ 15.09.2019ರಂದು ಜರಗಿದ
ಸಿಬ್ಬಂದಿ ತರಬೇತಿ ಕಾರ್ಯಕ್ರಮ

Private Circulation only

BOOK-POST

To,

If not delivered please return to :
**SRI RAMAKRISHNA CREDIT CO-OP. SOCIETY LTD.**
2nd Floor, Amruthotsava Building, Bunts Hostel Circle, Mangalore - 575 003.